ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

## ಸಿ.ಸಿ.ನಂಃ 1625/25

ಪಿಡಬ್ಲ್ಯುಃ – 1

ಸಿಡಬ್ಲ್ಯುಃ –1

ದಿನಾಂಕಃ 13.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಅಪ್ಪು |
| ತಂದೆಯ ಹೆಸರು | – ಮೋಹನ್ |
| ವಯಸ್ಸು | – 26 ವರ್ಷ |
| ವೃತ್ತಿ | – ಕೂಲಿ ಕೆಲಸ |
| ವಾಸಸ್ಥಳ | – ಕರಿಬಳಪು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-2 ರಿಂದ 6 ನನಗೆ ಗೊತ್ತು. ಆರೋಪಿ ನನಗೆ ಗೊತ್ತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಸ್ಥಳ ಹಾಗೂ ಅಮಾನತ್ತು ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸುಮಾರು 1 ವರ್ಷದ ಹಿಂದೆ ನಾನು ಕರಿಬಳಪು ಗ್ರಾಮದಲ್ಲಿ ಕ್ರಿಕೆಟ್ ಆಟ ಮುಗಿಸಿಕೊಂಡು ಬರುತ್ತಿದ್ದಾಗ ಪೊಲೀಸರು ನನ್ನನ್ನು ಕರೆದು ನಿಪಿ-1 ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ-

ದಿಃ 14.02.2025 ರಂದು ಚಾಸಾ-6, 3 ಮತ್ತು 4 ರವರು ನನ್ನನ್ನು ಮತ್ತು ಚಾಸಾ-2 ರವರನ್ನು ಕರಿಬಳಪು ಗ್ರಾಮದ ರಸ್ತೆಯ ಬದಿಯಲ್ಲಿ ನಿಂತಿದ್ದಾಗ ಈ ಪ್ರಕರಣದ ಆರೋಪಿ ಕರಿಬಳಪು ಗ್ರಾಮದ ತನ್ನ ಮನೆಯಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿಯನ್ನು ತಯಾರಿಸಿ ಹಾಗೂ ಪುಳಗಂಜಿಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುವ ಮೇರೆಗೆ ಆರೋಪಿ ಮನೆಯಲ್ಲಿ ಶೋಧನೆ ಮಾಡಿ ಅಮಾನತ್ತು ಪಂಚನಾಮೆಗೆ ಸಾಕ್ಷಿಗಳಾಗಬೇಕೆಂದು ಕೋರಿಕೊಂಡ ಮೇರೆಗೆ ನಾವು ಅದಕ್ಕೆ ಒಪ್ಪಿ ಅವರ ಜೊತೆಯಲ್ಲಿ ಆರೋಪಿಯ ಮನೆ ಬಳಿ ಹೋದೆವು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಆರೋಪಿ ತನ್ನ ಮನೆಯ ಬಳಿಯೇ ಇದ್ದು , ಪೊಲೀಸರು ಆರೋಪಿಗೆ ಮೇಲಿನ ವಿಚಾರ ಹೇಳಿ ಶೋಧನೆ ಮಾಡಿದ್ದು, ಆರೋಪಿಯ ಮನೆಯ ಅಡುಗೆ ಕೋಣೆಯ ಮೂಲೆಯಲ್ಲಿ 2 ಲೀ. ಸಾಮರ್ಥ್ಯದ ಹಸಿರು ಬಣ್ಣದ 02 ಪ್ಲಾಸ್ಟಿಕ್ ಬಾಟಲಿಗಳಲ್ಲಿ ಸುಮಾರು 2 ಲೀ. ಕಳ್ಳಬಟ್ಟಿ ಸಾರಾಯಿಯಂತೆ ಒಟ್ಟು 4 ಲೀ ಕಳ್ಳಬಟ್ಟಿ ಸಾರಾಯಿ ಇರುವುದು ಕಂಡು ಬಂದಿದ್ದು, ಅಲ್ಲೆ ಪಕ್ಕದಲ್ಲಿ 25 ಲೀಟರ್ ಸಾಮರ್ಥ್ಯದ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕ್ಯಾನ್ ನಲ್ಲಿದ್ದ ಪುಳಗಂಜಿಯನ್ನು ನೋಡಲಾಗಿ ಅದರಲ್ಲಿ ಒಟ್ಟು 25 ಲೀ ನಷ್ಟು ಗೋಧಿ ಬಣ್ಣದ ಕಲುಕಿನಿಂದ ಕೂಡಿದ ದ್ರಾವಣ ಇರುವುದು ಕಂಡು ಬಂದಿದ್ದು , ಅದು ಘಾಟು ವಾಸನೆಯಿಂದ ಕೂಡಿತ್ತು ಎಂದರೆ ಸರಿಯಲ್ಲ. ಪೊಲೀಸರು ಆರೋಪಿ ಕಳ್ಳಬಟ್ಟಿ ಸಾರಾಯಿಯನ್ನು ತಯಾರು ಮಾಡಲು ಬಳಸುವ ಉಪಕರಣಗಳನಲ್ಲು ಹಾಜರು ಪಡಿಸುವಂತೆ ಕೇಳಿದಾಗ ಆರೋಪಿ ತನ್ನ ಮನೆಯ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ತಯಾರಿಸಲು ಬಳಸುವ 50 ಲೀಟರ್ ಸಾಮರ್ಥ್ಯದ ಅಲ್ಯೂಮಿನಿಯಂ ಪಾತ್ರೆ, 15 ಲೀ. ಸಾಮರ್ಥ್ಯದ ತೆರೆಯ ಬಾಯಿಯ ಅಲ್ಯುಮಿನಿಯಂ ಪಾತ್ರೆ ತೋರಿಸಿದ್ದು, ಅವುಗಳನ್ನು ಪೊಲೀಸರು ನಮ್ಮಗಳ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ದೊರೆತ ಕಳ್ಳಬಟ್ಟಿ ಸಾರಾಯಿ ಹಾಗೂ ಪುಳಗಂಜಿಯಲ್ಲಿ ಪೊಲೀಸರು ರಾಸಾಯನಿಕ ಪರೀಕ್ಷೆಗೆಂದು 750 ಎಂ ಎಲ್ ಮಾದರಿಗೆಂದು ತೆಗೆದರು ಎಂದರೆ ಸರಿಯಲ್ಲ. ದೊರೆತ ಕಳ್ಳಬಟ್ಟಿ ಹಾಗೂ ಪುಳಗಂಜಿಯನ್ನು ಪೊಲೀಸರು ನಮ್ಮಗಳ ಸಮಕ್ಷಮ ಅಮಾನತ್ತು ಮಾಡಿ ಬೆಃ 10.00 ರಿಂದ 11.00 ಗಂಟೆಯವರೆಗೆ ನಿಪಿ-1 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದೆರ ಸರಿಯಲ್ಲ. ಆಗ ನಾನು ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 25.04.2025 ರಂದು ನಾನು ಪೊಲೀಸರ ಮುಂದೆ ದಿಃ14.02.2025ರಂದು------------------
--------------------------------------- ಹೇಳಿಕೆ ನೀಡಿರುತ್ತೇನೆ ಎಂದು ಮೇಲೆ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ

ಅಲ್ಲ ಗಳೆದ ಹೇಳಿಕೆಯ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ಪೊಲೀಸರು ನಿಪಿ-1 ಮಾಡುವ ಕಾಲಕ್ಕೆ ಎರಡು ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮಾದರಿಗೆಂದು ತೆಗೆದ ಕಳ್ಳಬಟ್ಟಿ ಸಾರಾಯಿ ಹಾಗೂ ಪುಳಗಂಜಿಯನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

ನಿಪಿ-1 ಮತ್ತು 2ರ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ - ಆರೋಪಿ ಪರ ವಕೀಲರಿಂದ ಏನು ಇಲ್ಲ.

ಮರು ವಿಚಾರಣೆಃ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.